# ಯಮಪಾಶ ಬೀಸಿದ ವೋಲ್ವೋ: ಸುಟ್ಟು ಕರಕಲಾದ ಜೀವಗಳು

**ಅಚ್ಯುತ 'ಸಂಕೇತಿ',**
**9448086811**

ಅದೊಂದು ಹೈಟೆಕ್ ಬಸ್ಸು. ಹೇಳಿ ಕೇಳಿ ವೋಲ್ವೋ ಸಂಸ್ಥೆಯದು. ಇತ್ತೀಚೆಗೆ ಭಾರತೀಯ ರಸ್ತೆಗಳಲ್ಲಿ ಹಳೆಯ ತಾಂತ್ರಿಕತೆಯ ಟಾಟಾ, ಅಶೋಕ್ ಲೇಲ್ಯಾಂಡ್ ಬಸ್ಸುಗಳನ್ನು ಮೀರಿಸಿ ಅತ್ಯಾಧುನಿಕ ತಾಂತ್ರಿಕತೆಯ ಬಸ್ಸು ವೋಲ್ವೋ ಕಾಲಿಟ್ಟು ಪ್ರಯಾಣದ ವ್ಯಾಖ್ಯಾನವನ್ನೇ ಪರಿವರ್ತಿಸಿಬಿಟ್ಟಿತು. ಆದರೂ ನಮ್ಮ ಭಾರತೀಯ ರಸ್ತೆಗಳಿಗೆ ವೋಲ್ವೋ ಬಸ್ಸುಗಳು ಎಷ್ಟು ಪ್ರಸ್ತುತ ಎಂಬ ಮಾತು ಕೂಡಾ ಕೇಳಿಬರುತ್ತಿತ್ತು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಅದರಲ್ಲೂ ಬೆಂಗಳೂರು ನಗರದಲ್ಲಿ ನಗರ ಸಾರಿಗೆ ಇದೀಗ ವೋಲ್ವೋ ಬಸ್ಸುಗಳದ್ದೇ ರಾಜ್ಯಭಾರ. ಇದರಲ್ಲಿ ಪಯಣಿಸುವುದೆಂದರೆ ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿಬಿಟ್ಟಿದೆ.

ಇಂಥ ಸುಖಾಸೀನ ವಿಲಾಸಿ ವೋಲ್ವೋ ಬಸ್ಸಿನಲ್ಲಿ ಇದ್ದುದು ಬರೋಬ್ಬರಿ 52 ಜನ. ಬೆಂಗಳೂರಿನವರೇ 45 ಪ್ರಯಾಣಿಕರು ಪಯಣಿಸುತ್ತಿದ್ದರು. ಬೆಂಗಳೂರಿನಿಂದ ಹೈದರಾಬಾದ್‌ಗೆ ಹೊರಟಿದ್ದ ಈ ಬಸ್ಸು 45 ಜನರ ಜೀವಕ್ಕೇ ಸಂಚಕಾರ ತಂದ ಘನಘೋರ ಆಕಸ್ಮಿಕ ಎಲ್ಲರನ್ನೂ ಬೆಚ್ಚಿಬೀಳಿಸಿದೆ. ರಾತ್ರಿ ಸಮಯ ಹೈದರಾಬಾದ್ ಸಮೀಪ ಮೆಹಬೂಬ್ ನಗರದ ಬಳಿ ಬಸ್ಸು ಸಾಗುತ್ತಿದ್ದಾಗ, ರಸ್ತೆ ವಿಭಜಕಕ್ಕೆ ಬಸ್ಸು ಡಿಕ್ಕಿ ಹೊಡೆದಿದೆ. ಜೊತೆಗೆ ಬಸ್ಸಿನ ಕೆಳಭಾಗದಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲೇ ಇಡೀ ಬಸ್ಸನ್ನೇ ವ್ಯಾಪಿಸಿ, ಒಳಗಿದ್ದವರು ಏನನ್ನೂ ಮಾಡಲಾಗದಂತೆ ಅಸಹಾಯಕತೆ ತಂದೊಡ್ಡಿದೆ.

ಹವಾನಿಯಂತ್ರಿತ ಬಸ್ಸು ಇದಾಗಿದ್ದರಿಂದ ಎಲ್ಲೂ ಕೂಡ ಸಾಮಾನ್ಯ ಬಸ್ಸಿನ ರೀತಿಯಲ್ಲಿ ಕಿಟಕಿ ತೆರೆಯುವ ವ್ಯವಸ್ಥೆ ಇಲ್ಲ; ಅಷ್ಟು ಸುಲಭವಾಗಿ ಒಡೆಯಲಾಗದ ದಪ್ಪದ ಗಾಜುಗಳನ್ನು ಸ್ಥಿರವಾಗಿರುವಂತಹುದು. ತಂಪಾಗಿ ನಿದ್ರೆಯ ಮಂಪರಿನಲ್ಲಿದ್ದ ಪ್ರಯಾಣಿಕರಿಗೆ ಮುಂದೆರಗಿದ ಅಪಘಾತದ ಅರಿವೂ ಇಲ್ಲ. ತುರ್ತು ನಿರ್ಗಮನದ ದ್ವಾರವು ಅಷ್ಟೇನೂ ದೊಡ್ಡದಾಗಿಲ್ಲದಿರುವುದರಿಂದ ಪ್ರಾಣರಕ್ಷಣೆ ಸುಲಭವಲ್ಲ. ಹೀಗಾಗಿ ಮುಂಜಾನೆ ನಡೆದ ಅಪಘಾತದಿಂದ 45 ಜನರು ಬೆಂಕಿಗೆ ಬೆಂದಹೋದದ್ದು ಅರಗಿಸಿಕೊಳ್ಳಲಾಗದ ಯಾತನೆಯ ಕ್ಷಣಗಳು.

ಈ ಅಪಘಾತಕ್ಕೆ ಕೇವಲ ಚಾಲಕನ ನಿರ್ಲಕ್ಷ್ಯ ಒಂದೇ ಕಾರಣವಲ್ಲ. ಇದರ ಹಿಂದೆ ಭಾರೀ ಜಾಲವಿದೆ. ಮೊದಲನೆಯದಾಗಿ ಭಾರೀ ಹಣ ಮಾಡುವ ಮೋಹ ಈ ಖಾಸಗಿ ಸಾರಿಗೆಯ ಹಿಂದಿರುವ ಬಹುದೊಡ್ಡ ಆಸೆಬುರುಕುತನ. ಎರಡನೆಯದಾಗಿ ಕೇವಲ ಪ್ರಯಾಣಿಕರ ಲಗೇಜುಗಳೇ ಅಲ್ಲದೆ, ಹೆಚ್ಚು ಹಣ ಮಾಡುವ ಅತ್ಯಾತುರದಿಂದ ಅತಿ ಹೆಚ್ಚಿನ ಕಾರ್ಗೋ ವಸ್ತುಗಳನ್ನು ಅತ್ಯಂತ ವ್ಯವಸ್ಥಿತವಾಗಿ ಇಂತಹ ವೋಲ್ವೋ ಬಸ್ಸುಗಳಲ್ಲಿ ಸಾಗಿಸಲಾಗುತ್ತಿದೆ. ದುರಂತವೆಂದರೆ, ಯಾರು ಏನು ನೀಡಿದರೂ, ಹಣ ಕಟ್ಟಿಸಿಕೊಂಡು ಅವರ ವಾಣಿಜ್ಯಿಕ ವಸ್ತುವನ್ನು ಇನ್ನೊಂದು ಊರಿಗೆ ಸಾಗಿಸುವ ಅವೈಜ್ಞಾನಿಕ ಪದ್ಧತಿ ಇದೆ. ಸಾಗಿಸುತ್ತಿರುವ ವಸ್ತು ಏನು? ಅದು ಬಸ್ಸಿನಲ್ಲಿ ಸಾಗಿಸಲು ಅರ್ಹವೇ? ಸ್ಫೋಟಕ ಪದಾರ್ಥ ಅದಾಗಿಲ್ಲವೇ? ಕಾನೂನು ಬಾಹಿರ ಸಾಮಗ್ರಿಗಳು ಅಲ್ಲಿಲ್ಲವೇ? ಎಂಬ ಯಾವುದೇ ಪರಾಮರ್ಶೆ ಇಲ್ಲಿ ನಡೆಯುವುದಿಲ್ಲ. ಎಲ್ಲವೂ ಒಂದು ಹೊಂದಾಣಿಕೆಯ ಮೇಲೆ ನಡೆಯುತ್ತದೆ. ಇಲ್ಲಿ ಏಜೆಂಟರು, ಚಾಲಕರು, ಮಧ್ಯವರ್ತಿಗಳು ಶಾಮೀಲಾಗಿರುತ್ತಾರೆ. ಎಷ್ಟೋ ವೇಳೆ ಅಕ್ರಮ ಹಣವೂ ಕೂಡಾ ಈ ಬಸ್ಸುಗಳ ಕೆಳಗೆ ತಂಪಾಗಿ

ಮಲಗಿರುತ್ತದೆ. ಯಾರಿಗೆ ತಲುಪಬೇಕೋ ಅವರಿಗೆ ಸಕಾಲಕ್ಕೆ ತಲುಪುತ್ತವೆ. ಯಾವ್ಯಾವುದೋ ಪಾರ್ಸಲ್‌ಗಳು ಇಲ್ಲಿ ಕೈಕೈ ಬದಲಾಯಿಸುತ್ತದೆ.

ರಸ್ತೆಯಲ್ಲಿ ಚಲಿಸುವ ಸಣ್ಣ ಸಣ್ಣ ಲಗೇಜ್ ಆಟೋಗಳನ್ನು ಸಾರಿಗೆ ಪೊಲೀಸರು ಆಗಾಗ ತಡೆದು ನಿಲ್ಲಿಸುತ್ತಾರೆ. ಲಗೇಜುಗಳನ್ನು ಪರೀಕ್ಷಿಸಿ, ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಸರಂಜಾಮು ಇದ್ದರೆ ಅವರಿಗೆ ದಂಡ ವಿಧಿಸುತ್ತಾರೆ. ಹೊಟ್ಟೆಪಾಡಿಗೆ ಆಟೋ ಓಡಿಸುತ್ತಾ, ಹೊಟ್ಟೆ ಹೊರೆದುಕೊಳ್ಳು ಆಟೋ ಚಾಲಕರು, ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವಾಗಲೂ ಪೊಲೀಸರ ಕಿರುಕುಳ ತಪ್ಪಿದ್ದಲ್ಲ. ಆದರೆ ವೋಲ್ವೋದಂತಹ ಬಸ್ಸುಗಳು ರಾಜ್ಯರಾಜ್ಯಗಳ ನಡುವೆ ಸಂಚರಿಸುವ, ದುಬಾರಿ ದರವನ್ನು ವಿಧಿಸಿ ಹಣಗಳಿಕೆಯ ಮಾರ್ಗವಾಗವಾಗಿ ಅದರ ಮಾಲೀಕರನ್ನು ಸಿರಿವಂತರನ್ನಾಗಿಸುತ್ತಿದೆ. ಈ ಸಾರಿಗೆ ಒಂದು ಮಾಫಿಯಾದಂತೆ ಮಾರ್ಪಾಡಾಗಿದೆ. ತೆರೆಮರೆಯಲ್ಲಿ ನಡೆಯುವ ಅನೇಕ ಘಟನೆಗಳು ಕತ್ತಲಿನಲ್ಲಿಯೇ ವ್ಯವಹಾರಗಳನ್ನು ಮುಗಿಸುತ್ತವೆ. ಬೆಳಕು ಹರಿಯುವುದರೊಳಗೆ ವ್ಯವಹಾರಗಳು ಮುಗಿದಿರುತ್ತವೆ. ಅಲ್ಲೆಲ್ಲಾ ಕಣ್ಮರೆಯಲ್ಲಿ ನಡೆಯುವ ಅವ್ಯವಹಾರಗಳು, ಕಾನೂನು ಬಾಹಿರಗಳು ಎಗ್ಗಿಲ್ಲದೆ ನಡೆಯುತ್ತಿದೆ. ಬಸ್ಸುಗಳ ಲಗೇಜುಗಳು ಎಂಥವು ಎಂಬುದನ್ನು ಪರೀಕ್ಷಿಸುವ ಯಾವ ವ್ಯವಸ್ಥೆಯೂ ಇಲ್ಲದಿರುವುದು ಇಂಥ ಅಪಘಾತಗಳಿಗೆ ಆ ಮೂಲಕ ಸಾವಿನ ಮನೆಗೆ ದೊಡ್ಡ ಆಹ್ವಾನವನ್ನೇ ನೀಡುತ್ತಿವೆ. ಇದನ್ನು ತಡೆಗಟ್ಟುವವರು ಯಾರು?

ಇನ್ನಾದರೂ ಸಂಬಂಧಿಸಿದ ಇಲಾಖೆ ಕಣ್ತೆರೆದು ಒಂದು ನಿರ್ದಿಷ್ಟ, ನಿರ್ದುಷ್ಟ ನೀತಿ ನಿಯಮಾವಳಿಗಳನ್ನು, ನಿಯಂತ್ರಣಗಳನ್ನು ರೂಪಿಸಬೇಕಿದೆ. ಒಟ್ಟಾರೆ ಸಾರಿಗೆ ವಹಿವಾಟುಗಳ ಮೇಲೆ ಒಂದು ಕಾನೂನಾತ್ಮಕ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಹೊಂದಬೇಕಾಗಿದೆ. ಅಕ್ರಮಗಳು ಘಟಿಸದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಜಬ್ಬಾರ್ ಟ್ರಾವೆಲ್ಸ್‌ಗೆ ಸೇರಿದ ಈ ವೋಲ್ವೋ ಬಸ್ ದುರಂತ ಎಲ್ಲರಿಗೂ ಒಂದು ಪಾಠವಾಗಲಿ. ಮತ್ತೆಂದೂ ಇಂಥ ಘಟನೆ ಮರುಕಳಿಸದಂತಾಗಲೀ. ಏನೇನೋ ಭವಿಷ್ಯದ ಕಲ್ಪನೆಗಳನ್ನು ಕಟ್ಟಿಕೊಂಡು, ಏನನ್ನೋ ಸಾಧಿಸಲು ಲೆಕ್ಕಾಚಾರಹಾಕುತ್ತಾ ಇಲ್ಲವೇ ಕಾತುರದಿಂದ ಕಾಯುತ್ತಿರುವ ತಂದೆತಾಯಿಗಳನ್ನು ನೋಡಲೆಂದೇ ಹೊರಟಿರುವ ಅದೆಷ್ಟೋ ಜೀವಗಳು ಸ್ಥಳದಲ್ಲೇ ಸುಟ್ಟು ಭಸ್ಮವಾಗದಿರಲಿ. ಸಮಸ್ಯೆಯ ಆಮೂಲಾಗ್ರ ನಿವಾರಣೆಗೆ ಗಂಭೀರವಾಗಿ ಚಿಂತಿಸಬೇಕಾದ ಅನಿವಾರ್ಯತೆ ಇದೀಗ ಎದುರಾಗಿದೆ.